# ಮೈಸೂರು ವಿಶ್ವವಿದ್ಯಾನಿಲಯ

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು–5

ಸಂ : ದೈ.ಶಿ.ವಿ./194/2019–2020

ದಿನಾಂಕ : 25ನೇ ಜುಲೈ 2019

E.mail-dir.deptofphyedn@gmail.com
Ph. No. 0821-2419288

ಗೆ,

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ
ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಮಾನ್ಯರೆ,

ವಿಷಯ : ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಪುರುಷರು ಮತ್ತು ಮಹಿಳೆಯರ ಕ್ರಾಸ್‌ಕಂಟ್ರಿ ಸ್ಪರ್ಧೆಗಳು ಹಾಗೂ ವಿಶ್ವವಿದ್ಯಾನಿಲಯ ತಂಡಗಳ ಆಯ್ಕೆ ಸ್ಪರ್ಧೆ 2019–2020

* * * * * *

ಈ ಸಾಲಿನ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಕ್ರಾಸ್‌ಕಂಟ್ರಿ (ಪು/ಮ) ಸ್ಪರ್ಧೆ ಹಾಗೂ ವಿಶ್ವವಿದ್ಯಾನಿಲಯದ ಕ್ರಾಸ್‌ಕಂಟ್ರಿ ತಂಡಗಳ ಆಯ್ಕೆ ಪ್ರಕ್ರಿಯೆಯನ್ನು ಚನ್ನರಾಯ ಪಟ್ಟಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಶ್ರಯದಲ್ಲಿ ದಿನಾಂಕ 7ನೇ ಸೆಪ್ಟೆಂಬರ್ 2019 ರಂದು ಬೆಳಿಗ್ಗೆ 6–00 ಘಂಟೆಗೆ ನಡೆಸಲಾಗುವುದು. ಈ ಸ್ಪರ್ಧೆಯಲ್ಲಿ ಭಾಗವಹಿಸುವ ಸ್ಪರ್ಧಿಗಳು ದಿನಾಂಕ 6ನೇ ಸೆಪ್ಟೆಂಬರ್ 2019 ರಂದು ಸಂಜೆ 4–30ಕ್ಕೆ ಚನ್ನರಾಯ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವೈದ್ಯಕೀಯ ತಪಾಸಣೆ ಪ್ರಮಾಣ ಪತ್ರದ ಜೊತೆಯಲ್ಲಿ ಹಾಜರಿರಬೇಕು. ವೈದ್ಯಕೀಯ ತಪಾಸಣೆ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ಸ್ಪರ್ಧಿಗಳನ್ನು ಮಾತ್ರ ಕ್ರಾಸ್‌ಕಂಟ್ರಿ ಸ್ಪರ್ಧೆಗಳಲ್ಲಿ ಭಾಗವಹಿಸಲು ಅನುಮತಿ ನೀಡಲಾಗುವುದು. ಮೇಲ್ಕಂಡ ಸ್ಪರ್ಧೆಗಳಿಗೆ ಪ್ರವೇಶ ಪತ್ರವನ್ನು ಸ್ವೀಕರಿಸಲು 28ನೇ ಆಗಸ್ಟ್ 2019 ರಂದು ಕಡೆಯ ದಿನಾಂಕವಾಗಿರುತ್ತದೆ. ನಿಗದಿತ ದಿನಾಂಕದೊಳಗೆ ಪ್ರವೇಶ ಪತ್ರಗಳನ್ನು ಶ್ರೀ ಜೆ.ಕೆ. ಪವನ್, ದೈಹಿಕ ಶಿಕ್ಷಣ ನಿರ್ದೇಶಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯ ಪಟ್ಟಣ – ಹಾಸನ ಜಿಲ್ಲೆ ಇವರಿಗೆ ಕಳುಹಿಸಬೇಕಾಗಿ ವಿನಂತಿ. **(ಶ್ರೀ ಜೆ.ಕೆ. ಪವನ್‌ರವರ ಮೊಬೈಲ್ ನಂ : 7624993608)**

**ಸ್ಪರ್ಧೆಯ ವಿವರ :**

| | | | |
|---|---|---|---|
| 1. | ಕ್ರಾಸ್‌ಕಂಟ್ರಿ ರೇಸ್ | ಪುರುಷರಿಗೆ | 10 ಕಿಲೋಮೀಟರ್‌ಗಳು |
| 2. | ಕ್ರಾಸ್‌ಕಂಟ್ರಿ ರೇಸ್ | ಮಹಿಳೆಯರಿಗೆ | 10 ಕಿಲೋಮೀಟರ್‌ಗಳು |

ಕ್ರಾಸ್‌ಕಂಟ್ರಿ ಸ್ಪರ್ಧೆಗೆ ಪುರುಷರ ವಿಭಾಗದಲ್ಲಿ ಗರಿಷ್ಠ 6 ಮಂದಿಗಳ ತಂಡ ಮತ್ತು ಮಹಿಳಾ ವಿಭಾಗದಲ್ಲಿ ಗರಿಷ್ಠ 6 ಮಂದಿಗಳ ತಂಡವನ್ನು ಕಳುಹಿಸಬಹುದು. ತಂಡ ಪ್ರಶಸ್ತಿ ಪಡೆಯಬೇಕಾದರೆ ಪುರುಷರ ವಿಭಾಗದಲ್ಲಿ ಕನಿಷ್ಠ 4 ಮಂದಿ ಮತ್ತು ಮಹಿಳಾ ವಿಭಾಗದಲ್ಲಿ ಕನಿಷ್ಠ 4 ಮಂದಿ ಸ್ಪರ್ಧಿಗಳು ಸ್ಪರ್ಧೆಯನ್ನು ಖಡ್ಡಾಯವಾಗಿ ಮುಕ್ತಾಯಗೊಳಿಸಬೇಕು. ಕಡಿಮೆ ಸಂಖ್ಯೆಯಲ್ಲಿಯೂ ಸಹ ಸ್ಪರ್ಧಿಗಳನ್ನು ಕಳುಹಿಸಬಹುದು.

ಮೇಲ್ಕಂಡ ಸ್ಪರ್ಧೆಗಳಲ್ಲಿ ಭಾಗವಹಿಸಿ ಮೊದಲ ಆರು ಸ್ಥಾನಗಳನ್ನು ಪಡೆದವರಿಗೆ ಪ್ರಮಾಣ ಪತ್ರವನ್ನು ನೀಡಲಾಗುವುದು ಮತ್ತು ಮೊದಲ ಮೂರು ಸ್ಥಾನಗಳನ್ನು ಪಡೆದವರಿಗೆ ಪದಕಗಳನ್ನು ಹಾಗೂ ತಂಡ ಪ್ರಶಸ್ತಿ ಪಡೆದವರಿಗೆ ಭಾರತೀನಗರದ ಭಾರತೀ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎಂ. ಶಿವಲಿಂಗೇಗೌಡರು 2009–2010ನೇ ಸಾಲಿನಲ್ಲಿ ಕೊಡುಗೆಯಾಗಿ ನೀಡಿರುವ ಬೆಳ್ಳಿ ಪರ್ಯಾಯ ಪಾರಿತೋಷಕಗಳನ್ನು ವಿತರಿಸಲಾಗುವುದು.

ದಯಮಾಡಿ ಮೇಲಿನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಸಹಕರಿಸಬೇಕಾಗಿ ವಿನಂತಿ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ

25/7/2019

(ಡಾ. ಪಿ. ಕೃಷ್ಣಯ್ಯ)
ನಿರ್ದೇಶಕರು (ಪ್ರಭಾರ)

ನಿರ್ದೇಶಕರು
ದೈಹಿಕ ಶಿಕ್ಷಣ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು - 570 005

**ವಂದನಾಪೂರ್ವಕವಾಗಿ ಪ್ರತಿಗಳನ್ನು** ಸಂಪಾದಕರು/ವರದಿಗಾರರು,..........................................ಪತ್ರಿಕೆ, ಮೈಸೂರು ಇವರಿಗೆ ಪ್ರಕಟಣೆಯ ಕೃಪೆಗಾಗಿ ಕಳುಹಿಸಲಾಗಿದೆ.

D/ Sport Time Table- No. 49